## ಸಾಂಪ್ರದಾಯಿಕ ಒಡವೆಗೆ ಆಧುನಿಕ ಸ್ಪರ್ಶ

# ಹೆರಿಟೇಜ್ ಆಭರಣ



ಪರಂಪರೆ ಲಾಗಾಯ್ತಿನಿಂದ ಬಂದರೂ ಫ್ಯಾಷನ್‌ಗೂ ಪರಂಪರೆಗೂ ಎಂದೆಂದಿಗೂ ಅನನ್ಯ ನಂಟು ಇದ್ದೇ ಇದೆ. ಹೆರಿಟೇಜ್ ಆಭರಣ ಸಂಗ್ರಹದ ಸೊಬಗೇ ಬೇರೆ. ಸಾಂಪ್ರದಾಯಿಕ ಲುಕ್ ಇದ್ದರೂ ಸಮಕಾಲೀನ ಟ್ರೆಂಡ್‌ಗೆ ಯಾವುದೇ ಧಕ್ಕೆಯಾಗದೆ ಸದಾ ಫ್ಯಾಷನೆಬಲ್ ಆಗಿಯೇ ಕಾಣುವ ಈ ಆಭರಣ ಮಹಿಳೆಯರ ಮೆಚ್ಚು.

■ ಯು.ಅನಂತ್

ಅಜ್ಜಿಯ ಕತ್ತಿನಲ್ಲಿ ಕಾಸಿನ ಸರ ಮಿಂಚುತ್ತಿದ್ದರೆ ಮೊಮ್ಮಗಳಿಗೆ ಅದೇನೋ ಪುಳಕ. ಅಮ್ಮನ ಕಿವಿಯಲ್ಲಿ ಚಿನ್ನದ ಜುಮುಕಿ ನೇತಾಡುತ್ತಿದ್ದರೆ ಮಗಳ ಕಣ್ಣು ಜುಮುಕಿ ಮೇಲೆಯೇ. ಅತ್ತೆಯ ಕತ್ತಿನಲ್ಲಿ ಮುತ್ತಿನ ಹಾರ ಫಳ ಫಳ ಹೊಳೆಯುತ್ತಿದ್ದರೆ ಅದರ ಗಮ್ಮತ್ತೇ ಬೇರೆ... ಇದು ಸುಮಾರು ದಶಕದ ಹಿಂದಿನ ಚಿತ್ರಣ. ಅಜ್ಜಿ, ಅಮ್ಮಂದಿರು ಅಂದು ತೊಟ್ಟುಕೊಳ್ಳುತ್ತಿದ್ದ ಅದೇ ಜುಮುಕಿ, ಕಾಸಿನ ಸರ, ಉದ್ದನೆ ಹಾರ, ಚಂದದ ನೆಕ್ಲೆಸ್, ಅಂದದ ಬಳೆ, ಚಿನ್ನದ ಗುಂಡುಗಳನ್ನು ಪೋಣಿಸಿದ ಮಣಿ ಹಾರಗಳಿಗೆ ಈಗ ಆಧುನಿಕ ಸ್ಪರ್ಶ ಎಡತಾಕಿದೆ. ಅಜ್ಜಿ, ಅಮ್ಮ, ಮಗಳು, ಮೊಮ್ಮಗಳು.. ಎಲ್ಲರೂ ಒಂದೇ ಆಭರಣವನ್ನು ಬೇಕಾದ ಹಾಗೆ ಸಂದರ್ಭಕ್ಕೆ ತಕ್ಕಂತೆ ತೊಟ್ಟು ಕೊಂಡು ಮಿಂಚುವಂಥ ಕಾಲ ಬಂದಿದೆ. ಇದು ಈಗಿನ ಫ್ಯಾಷನ್ ಟ್ರೆಂಡ್ ಕೂಡ.



ಪರಂಪರೆ ಲಾಗಾಯ್ತಿನಿಂದ ಬಂದರೂ ಫ್ಯಾಷನ್‌ಗೂ ಪರಂಪರೆಗೂ ಎಂದೆಂದಿಗೂ ಅನನ್ಯ ನಂಟು ಇದ್ದೇ ಇದೆ. ಹೆರಿಟೇಜ್ ಎಂದರೆ ಪರಂಪರೆ; ಈ ಆಭರಣ ಸಂಗ್ರಹದ ಸೊಬಗೇ ಬೇರೆ. ಸಾಂಪ್ರದಾಯಿಕ ಲುಕ್ ಇದ್ದರೂ ಸಮಕಾಲೀನ ಟ್ರೆಂಡ್‌ಗೆ ಯಾವುದೇ ಧಕ್ಕೆಯಾಗದೆ ಸದಾ ಫ್ಯಾಷನೆಬಲ್ ಆಗಿಯೇ ಕಾಣುವ ಇಂಥ ಆಭರಣ ಮದುವೆ ಮತ್ತಿತರ ಶುಭ ಸಮಾರಂಭಗಳಿಗೆ ಹೇಳಿ ಮಾಡಿಸಿದ್ದು. ನಿತ್ಯ ಈ ಆಭರಣ ಹಾಕಿಕೊಂಡರೂ ಅದು ಫ್ಯಾಷನ್ನೇ.

ಚಿನ್ನ ಬೆಳ್ಳಿ ಮೇಲೆ ಮುತ್ತು, ಪಚ್ಚೆ, ನೀಲ, ಹವಳಗಳನ್ನು ಕೂರಿಸಿ ಹೊಸ ಪರಿಕಲ್ಪನೆಯೊಂದಿಗೆ ಮಾಡಿದ ಆಭರಣ ಸಾಂಪ್ರದಾಯಿಕತೆಗೆ ಆಧುನಿಕ ಮೆರುಗು ನೀಡಿದಂತೆ ಕಾಣುತ್ತದೆ. ಕೈಕುಸುರಿಯಿಂದ ಮಾಡಿದ ಒಡವೆಯಲ್ಲಿ ವಿನ್ಯಾಸಗಾರನ ಚಾಕಚಕ್ಯತೆಯ ಛಾಪು ಒತ್ತಿದೆ. ಇಲ್ಲೂ ಮೂಲ ಆಭರಣ ವಿನ್ಯಾಸಕ್ಕೆ ಕೊಂಚವೂ ಧಕ್ಕೆಯಾಗದಂತೆ ತಯಾರಿಸಿದ ವಿನ್ಯಾಸಗಾರನ ಪರಿಶ್ರಮ ಒಡವೆಯನ್ನು ಮತ್ತಷ್ಟು ಆಕರ್ಷಕವಾಗಿಸುವಲ್ಲಿ ಸಫಲವಾಗಿದೆ.

ಸಾಂಪ್ರದಾಯಿಕ ಒಡವೆಗೆ ಸಮಕಾಲೀನ ಟಚ್ ನೀಡಿ ಇದೀಗ ಬೆಂಗಳೂರಿನ ಜಯನಗರದಲ್ಲಿರುವ ಆರ್ಣವ ಒಡವೆ ಮಳಿಗೆ ಹೊಸ ಹೊಸ ವಿನ್ಯಾಸಗಳ ಹೆರಿಟೇಜ್ ಆಭರಣಗಳ ಸಂಗ್ರಹವನ್ನು ಹೊರತಂದಿದೆ. ಒಂದೇ ಸೂರಿನಡಿ ಬೈತಲೆ ಬೊಟ್ಟಿನಿಂದ ಹಿಡಿದು ನೆಕ್ಲೆಸ್, ಬಳೆವರೆಗಿನ ಎಲ್ಲ ರೀತಿಯ ಆಭರಣಗಳೂ ಲಭ್ಯ.

‘ಗ್ರಾಹಕರು ಮನೆಯಲ್ಲಿದ್ದ ಅಜ್ಜಿಯರ ಕಾಲದ ಒಡವೆಯನ್ನು ತಂದರೆ ಪರಂಪರೆಗೆ ಕೊಂಚವೂ ಹಾನಿಯಾಗದಂತೆ ಹೊಸ ರೂಪದಲ್ಲಿ ಒಡವೆಗಳನ್ನು ವಿನ್ಯಾಸ ಮಾಡಿಕೊಡುತ್ತೇವೆ. ಮಹಿಳೆಯರ ಮನದ ಭಾವನೆಗಳನ್ನು ಒಡವೆಯಲ್ಲಿ ಪಡಿಮೂಡಿಸುವ ಪ್ರಯತ್ನ ಮಾಡಿದ್ದೇವೆ. ನೆಕ್ಲೆಸ್, ಕಿವಿಯೋಲೆ, ಬಳೆ, ಆ್ಯಂಟಿಕ್ ಸಿಲ್ವರ್ ಒಡವೆಗಳಲ್ಲಿ ಈ ಅಂಶಗಳು ವ್ಯಕ್ತವಾಗುತ್ತವೆ. ಒಂದೊಂದು ಆಭರಣವೂ ಒಂದೊಂದು ಕಥೆ ಹೇಳುತ್ತವೆ’ ಎನ್ನುತ್ತಾರೆ ಆರ್ಣವ ಆಭರಣ ಮಳಿಗೆಯ ವಿನ್ಯಾಸ ವಿಭಾಗದ ಮುಖ್ಯಸ್ಥೆ ಅಶ್ವಿನಿ ಓಝಾ.